ಶಿರಬೂರ್ ನಲ್ಲಿ ಒಂದು 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಗಳಿಗೆ ಈಗಾಗಲೇ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಹೆಚ್ಚುವರಿ ಟಿ.ಸಿ.ಗಳ ಸ್ಥಾಪನೆಯ ಬಗ್ಗೆ

08 (169) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆಯಿಂದ ಹೆಚ್ಚುವರಿ ಟಿ.ಸಿ. ಹಾಕಲು ಕೋರಿ ಬಂದ ಅರ್ಜಿಗಳೆಷ್ಟು; ನಿರಾಕರಿಸಿರುವ ಅರ್ಜಿಗಳೆಷ್ಟು;

ಆ) ಅವುಗಳನ್ನು ಪರಿಗಣಿಸಿ ಅಂದಾಜು ಪಟ್ಟಿ ತಯಾರು ಮಾಡಲಾಗಿದೆಯೇ;

ಇ) ಎಷ್ಟು ವರ್ಷದಿಂದ ಬೇಡಿಕೆ ಇದೆ; ವಿಳಂಬ ಮಾಡಲು ಕಾರಣವೇನು;

ಈ) 3-4 ವರ್ಷದಿಂದ ಅರ್ಜಿ ಕೊಟ್ಟರೂ ಟಿ.ಸಿ. ಹಾಕದಿರಲು ಕಾರಣವೇನು;

ಉ) ಯಾವಾಗ ಹೆಚ್ಚುವರಿ ಟಿ.ಸಿ.ಗಳನ್ನು ಅಳವಡಿಸಲಾಗುವುದು;

ಊ) ವೋಲ್ಟೇಜ್ ಕಡಿಮೆ ಇರುವ ಕಡೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆಯಿಂದ ಹೆಚ್ಚುವರಿ ಟಿ.ಸಿ. ಹಾಕಲು 4 ಅರ್ಜಿಗಳು ಬಂದಿರುತ್ತವೆ. ಯಾವ ಅರ್ಜಿಗಳನ್ನು ನಿರಾಕರಿಸಿರುವುದಿಲ್ಲ.

ಆ) ಸ್ವೀಕೃತವಾದ ಎಲ್ಲಾ ಅರ್ಜಿಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆ.

ಇ) 9 ತಿಂಗಳುಗಳಿಂದ ಬೇಡಿಕೆ ಇದೆ. ಈಗಾಗಲೇ 3 ಕೆಲಸಗಳು ಪ್ರಗತಿಯಲ್ಲಿವೆ. ಉಳಿದ ಒಂದು ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಈ) 3-4 ವರ್ಷಗಳ ಹಿಂದಿನ ಅರ್ಜಿಗಳು ಯಾವುದೂ ಬಾಕಿ ಇರುವುದಿಲ್ಲ.

ಉ) ಮಾರ್ಚ್ 2004ರ ಅಂತ್ಯದೊಳಗೆ ಮೇಲಿನ ಹೆಚ್ಚುವರಿ ಟಿ.ಸಿ.ಗಳನ್ನು ಅಳವಡಿಸಲಾಗುವುದು.

ಊ) ವೋಲ್ಟೇಜ್ ಕೊರತೆ ಇರುವ ಮತ್ತು ಅಧಿಕ ಒತ್ತಡ ಇರುವ ಕಡೆ ಹೆಚ್ಚುವರಿಯಾಗಿ 64 ಪರಿವರ್ತಕಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಜನವರಿ 2003 ರಿಂದ ಇಲ್ಲಿಯವರೆಗೆ 75 ಪರಿವರ್ತಕಗಳನ್ನು ಅಳವಡಿಸಲಾಗಿದೆ.

ಹೆಚ್.ಕೆ.ಡಿ. ಬಿ. ಹಾಗೂ ಎಂ.ಎ.ಡಿ. ಬಿ.ಗೆ ಬಿಡುಗಡೆ ಮಾಡಿರುವ ಹಣದ ಬಗ್ಗೆ

09 (199) : ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000-01 ರಿಂದ 2003-04 ರ ವರೆಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಬಯಲುಸೀಮೆ ಅಭಿವೃದ್ಧಿ ಮಂಡಳಿಗಳಿಗೆ ನಿಗಧಿಪಡಿಸಲಾದ ಹಾಗೂ ಬಿಡುಗಡೆ ಮಾಡಿದ ಹಣ ಎಷ್ಟು;

ಆ) ಬಿಡುಗಡೆಯಾದ ಹಣದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ; (ವಿವರವನ್ನು ವರ್ಷವಾರು ಮಂಡಳಿವಾರು ನೀಡುವುದು)?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :